## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ

## ಸಿ.ಸಿ ಸಂಖ್ಯೆ ::271/2025

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಹೆಚ್. ಪ್ರಭಾಕರ | **PW**-02 |
| **ತಂದೆಯ ಹೆಸರು** | : | ಶಂಕರ್ ಆರ್. ಅಡಿಗ | **CW**-08 |
| **ವಯಸ್ಸು** | : | 62 ವರ್ಷ | |
| **ಉದ್ಯೋಗ** | : | ನಿವೃತ್ತ ನೌಕರ | |
| **ವಾಸಸ್ಥಳ** | : | ಅಂಬಲ ಪಾಡಿ, ಉಡುಪಿ. | |

**ದಿನಾಂಕಃ29-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

## :: ಮುಖ್ಯ ವಿಚಾರಣೆ :: A.P.P ರವರಿಂದ ::

ದಿಃ01-06-2025 ರಂದು ನಾವು ಕುಟುಂಬ ಸಮೇತ ಪ್ರವಾಸಕ್ಕಾಗಿ ಉಡುಪಿಯಿಂದ ಶೃಂಗೇರಿ, ಸಿರಿಮನೆ ಫಾಲ್ಸ್ ಗೆ ನಮ್ಮ ಕಾರ್ ಸಂಖ್ಯೆ ಕೆ.ಎ-20/ಎಮ್.ಎಫ್-8065 ವಾಹನದಲ್ಲಿ ನಾವು 7 ಜನ ಬಂದಿದ್ದೆವು ನಾನು ಸದರಿ ಕಾರಿನ ಮಾಲೀಕನಾಗಿರುತ್ತೇನೆ. ನಾವು ಸಿರಿಮನೆ ಫಾಲ್ಸ್ ಪ್ರವಾಸ ಮುಗಿಸಿ ವಾಪಾಸ್ಸು ಉಡುಪಿಗೆ ಹೋಗಲು ಹಿಂದಿರುಗುತ್ತಿದ್ದಾಗ ಗಂಡಘಟ್ಟ ಬಳಿ ನಮ್ಮ ಎದುರುಗಡೆ ಮೂಖಾಂಬಿಕ ಬಸ್ ಕೆ.ಎ.14/ಸಿ-0599 ಅತಿವೇಗದಿಂದ ಬರುತ್ತಿತ್ತು. ಸದರಿ ರಸ್ತೆ ತುಂಬಾ ಇಕ್ಕಟ್ಟಿನಿಂದ ಕಿರಿದಾದ ರಸ್ತೆಯಾಗಿತ್ತು. ಆದ ಕಾರಣ ನಮ್ಮ ಕಾರಿನ ಚಾಲಕ ಕಾರನ್ನು ರಸ್ತೆಯ ಎಡಭಾಗಕ್ಕೆ ತೆಗೆದುಕೊಂಡರು ಆ ಸಂದರ್ಭದಲ್ಲಿ ನಮ್ಮ ಕಾರಿಗೆ ಯಾರೋ ಡಿಕ್ಕಿ ಹೊಡೆದಂತೆ ಆಯಿತು.

2. ತಕ್ಷಣ ನಾವು ನಮ್ಮ ಕಾರನ್ನು ನಿಲ್ಲಿಸಿ ನೋಡಲಾಗಿ ನಮ್ಮ ಹಿಂದೆ ಬರುತ್ತಿದ್ದ ಬೈಕ್ ಸಂಖ್ಯೆ ಕೆ.ಎ.14/ಇ.ಎನ್-9997 ನಮ್ಮ ಗಾಡಿಗೆ ಹೊಡೆದಿದ್ದ ವಿಚಾರ ತಿಳಿಯಿತು. ಸದರಿ ಬೈಕ್ ನಲ್ಲಿ ಬರುತ್ತಿದ್ದ ಚಾಸಾ -1 ರವರು ರಸ್ತೆಯ ಎಡಭಾಗಕ್ಕೆ ಬಿದ್ದಿದ್ದರು ಮತ್ತು ಒಂದು ಹುಡುಗಿ ರಸ್ತೆಯ ಬಲಭಾಗಕ್ಕೆ ಬಿದ್ದಿದ್ದಳು, ಆಕೆಯ ತಲೆಗೆ ಗಂಭೀರ ಪೆಟ್ಟಾಗಿ ರಕ್ತ ಸ್ರಾವವಾಗುತ್ತಿತ್ತು. ತಕ್ಷಣ ನಾವು ಸದರಿ ಚಾಸಾ-1 ಮತ್ತು ಮೃತ ರಕ್ಷಿತಾಳನ್ನು ನಮ್ಮ-

ವಾಹನದಲ್ಲಿ ಚಿಕಿತ್ಸೆಗಾಗಿ ಶೃಂಗೇರಿಯಲ್ಲಿರುವ ಅಭಿನವ ವಿದ್ಯಾತೀರ್ಥ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ವೈದ್ಯರು ಸದರಿ ರಕ್ಷಿತಾಳನ್ನು ಪರಿಶೀಲಿಸಿದ ನಂತರ ಮರಣ ಹೊಂದಿರುವುದಾಗಿ ತಿಳಿಸಿದರು. ನಾನು ಈ ಪ್ರಕರಣದಲ್ಲಿ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದಲ್ಲಿರುವ 2 ನೇ ಆರೋಪಿತರೇ ಆ ದಿನ ನಮ್ಮ ಕಾರನ್ನು ಅಪಘಾತವಾದ ದಿನ ಚಲಿಸುತ್ತಿದ್ದರು. 1 ನೇ ಆರೋಪಿ ಅಪಘಾತವಾದ ದಿನ ಮೂಖಾಂಬಿಕ ಬಸ್ ಅನ್ನು ಚಲಿಸುತ್ತಿದ್ದರು.

**::ಪಾಟೀಸವಾಲು ::ಶ್ರೀ.H.R.U 2 ನೇ ಆರೋಪಿತರ ವಕೀಲರಿಂದ ::**

ಸದರಿ ಮೃತ ರಕ್ಷಿತಾಳ ತಲೆಗೆ ಯಾವ ವಾಹನ ತಾಗಿ ರಕ್ತಸ್ರಾವ ಗಾಯವಾಯಿತು ಎಂದು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಕಾರಿನ ಒಳಗೆ ಕುಳಿತುಕೊಂಡಿದ್ದೆ ಎಂದು ನುಡಿಯುತ್ತಾರೆ. ಸದರಿ ಅಪಘಾತ ಯಾಕೆ ಸಂಭವಿಸಿತು ಎಂದರೆ ಸಾಕ್ಷಿಯು ನಮ್ಮ ಹಿಂದೆ ಬರುತ್ತಿದ್ದ ದ್ವಿಚಕ್ರ ವಾಹನವು ನಮ್ಮ ಕಾರಿಗೆ ಡಿಕ್ಕಿ ಮಾಡಿದ್ದರಿಂದ ಸಂಭವಿಸಿತು ಎಂದು ನುಡಿಯುತ್ತಾರೆ. 2 ನೇ ಆರೋಪಿತರು ಎದುರುಗಡೆಯಿಂದ ವೇಗದಿಂದ ಬರುತ್ತಿದ್ದ ಬಸ್ ಅನ್ನು ನೋಡಿ ಸದರಿ ರಸ್ತೆಯೂ ಸಹ ಕಿರಿದಾಗಿದ್ದರಿಂದ ಕಾರನ್ನು ಎಡಭಾಗಕ್ಕೆ ತೆಗೆದುಕೊಂಡರು. ಒಂದು ವೇಳೆ ಸದರಿ 2 ನೇ ಆರೋಪಿತರು ಕಾರನ್ನು ಆ ಸಂದರ್ಭದಲ್ಲಿ ಎಡ ಭಾಗಕ್ಕೆ ತೆಗೆದುಕೊಳ್ಳದೇ ಇದ್ದಿದ್ದರೇ ಸದರಿ ಬಸ್ ನಮ್ಮ ಕಾರಿಗೆ ಡಿಕ್ಕಿ ಮಾಡುವ ಸಂದರ್ಭ ಹೆಚ್ಚಾಗಿತ್ತು ಮತ್ತು ಸದರಿ ಕಾರಿನಲ್ಲಿದ್ದ ನಾವು 7 ಜನರೂ ಅಪಘಾತಕ್ಕೆ ಈಡಾಗುತ್ತಿದ್ದೆವು. ಚಾಸಾ-1 ರವರು ನಿಧಾನವಾಗಿ ಮತ್ತು ಜಾಗ್ರತೆಯಿಂದ ದ್ವಿಚಕ್ರವಾಹನವನ್ನು ಚಲಿಸಿಕೊಂಡು ಬಂದರೆ ಈ ಅಪಘಾತ ಸಂಭವಿಸುತ್ತಿರಲಿಲ್ಲ ಎಂದರೆ ಸರಿ.

**::ಪಾಟೀಸವಾಲು ::ಶ್ರೀ.G.M.V 1 ನೇ ಆರೋಪಿತರ ವಕೀಲರಿಂದ ::**

ನನಗೆ ಅಪಘಾತದ ಬಗ್ಗೆ ಮಾಹಿತಿ ಇರುತ್ತದೆ. ಸದರಿ ಅಪಘಾತ ನಾನು ನನ್ನ ಕಾರಿನಲ್ಲಿ ಹೋಗುತ್ತಿದ್ದಾಗ ಸಂಭವಿಸಿರುತ್ತದೆ. ಅಪಘಾತವಾದ ಸ್ಥಳದಲ್ಲಿದ್ದ ರಸ್ತೆ ನೇರವಾದ ರಸ್ತೆಯಾಗಿತ್ತು. ಸದರಿ ರಸ್ತೆಯ ಎರಡೂ ಬದಿಯಲ್ಲಿಯೂ ಗದ್ದೆ ಇತ್ತೇ ಎಂದರೆ ಸಾಕ್ಷಿಯು ನಮ್ಮ ಎಡಭಾಗಕ್ಕೆ ಗದ್ದೆ ಇತ್ತು ಬಲ ಭಾಗದಲ್ಲಿ ನಾನು ನೋಡಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕಾರು ಎಡಭಾಗಕ್ಕೆ ಚಲಿಸಿದ ನಂತರ 2-3 ಅಡಿ ಜಾಗ ಎಡಭಾಗಕ್ಕೆ

ಪಾದಚಾರಿಗಳಿಗೆ ಓಡಾಡಲು ಇತ್ತು. ನಮ್ಮ ಕಾರು ದ್ವಿಚಕ್ರ ವಾಹನವನ್ನು ಓವರ್ ಟೇಕ್ ಮಾಡಿರುವುದಿಲ್ಲ. ಅಪಘಾತವಾದ ದಿನ ನಮ್ಮ ಕಾರಿನ ಹಿಂದೆ ಬರುತ್ತಿದ್ದ ದ್ವಿಚಕ್ರ ವಾಹನ ನನಗೆ ಕಾಣಿಸಲಿಲ್ಲ. ಅಪಘಾತವಾದ ದಿನ ನಮ್ಮ ಕಾರಿನ ಎದುರುಗಡೆ 1 ನೇ ಆರೋಪಿತರು ಅತಿವೇಗ ಮತ್ತು ಅಜಾಗರೂಕತೆ ಯಿಂದ ಓಡಿಸಿಕೊಂಡು ಬಂದ ಪರಿಣಾಮ 2 ನೇ ಆರೋಪಿ ನಮ್ಮ ಕಾರನ್ನು ರಸ್ತೆಯ ಎಡ ಭಾಗಕ್ಕೆ ನಿಧಾನವಾಗಿ ತೆಗೆದುಕೊಂಡು ನಿಧಾನವಾಗಿ ಮುಂದೆ ಚಲಿಸುತ್ತಿರುವಾಗ ನಮ್ಮ ವಾಹನಕ್ಕೆ ಯಾರೋ ಡಿಕ್ಕಿ ಹೊಡೆದಂತೆ ಆದಾಗ ಕಾರನ್ನು ನಿಲ್ಲಿಸಿದ್ದೆವು. ನಮ್ಮ ಕಾರನ್ನು ನಿಲ್ಲಿಸುವಾಗ ಕಾರಿನ ಚಾಲಕ ಯಾವುದೇ ಸೂಚನೆಯನ್ನು ನೀಡದೆ ನಿಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಕಾರಿನ ಹಿಂದೆ ಬರುತ್ತಿದ್ದ ವಾಹನಕ್ಕೆ ಸರಿಯಾದ ಸೂಚನೆಯನ್ನು ನಮ್ಮ ವಾಹನದ ಚಾಲಕರು ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಕಾರನ್ನು ನಿಧಾನವಾಗಿ ಚಲಿಸುವ ಪೂರ್ವದಲ್ಲಿ ನಮ್ಮ ಕಾರಿನ ಚಾಲಕರು ಕಾರನ್ನು ನಿಧಾನವಾಗಿ ಚಲಿಸುತ್ತಿರುವ ಬಗ್ಗೆ ಹಿಂದೆ ಬರುತ್ತಿದ್ದ ವಾಹನದ ಚಾಲಕರಿಗೆ ಸೂಚನೆಯನ್ನು ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಕಾರಿನ ಹಿಂದೆ ಬರುತ್ತಿದ್ದ ದ್ವಿಚಕ್ರ ವಾಹನವು ನಮ್ಮ ಕಾರಿನ ಹಿಂಭಾಗದ ಭಾಗಕ್ಕೆ ಡಿಕ್ಕಿ ಮಾಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಕಾರಿನ ಬಲಭಾಗದ ಹಿಂಬದಿಗೆ ಡಿಕ್ಕಿ ಹೊಡೆಯಲಾಯಿತು ಎಂದು ನುಡಿಯುತ್ತಾರೆ.

2. ಸದರಿ ನಮ್ಮ ಕಾರಿನ ಹಿಂಬದಿಗೆ ದ್ವಿಚಕ್ರ ವಾಹನ ಡಿಕ್ಕಿ ಮಾಡಿದ ಸಮಯಕ್ಕೆ ಎದುರುನಿಂದ ಬರುತ್ತಿದ್ದ ಬಸ್ ನಮ್ಮ ಕಾರಿನ ಮಗ್ಗುಲಲ್ಲಿ ಹೋಯಿತು. ನಮ್ಮ ಕಾರಿನ ಚಾಲಕ ನಮ್ಮ ಎದುರುಗಡೆ ಬರುತ್ತಿದ್ದ ಬಸ್ ಸುಮಾರು 100 ಅಡಿ ದೂರ ದಲ್ಲಿ ಇದ್ದಾಗ ಎಡಕ್ಕೆ ನಮ್ಮ ಕಾರನ್ನು ತೆಗೆದುಕೊಂಡಿರುತ್ತಾರೆ ಮತ್ತು ಅದೇ ಸಂದರ್ಭಕ್ಕೆ ನಮ್ಮ ಹಿಂಬದಿಯಲ್ಲಿ ಬರುತ್ತಿದ್ದ ದ್ವಿಚಕ್ರ ವಾಹನ ನಮ್ಮ ಕಾರಿನ ಹಿಂಭಾಗಕ್ಕೆ ಡಿಕ್ಕಿ ಮಾಡಿರುತ್ತದೆ. ಅದೇ ಸಂದರ್ಭದಲ್ಲಿ ನಮ್ಮ ಕಾರಿನ ಎದುರುಗಡೆ ಇಂದ ಬರುತ್ತಿದ್ದ ಬಸ್ ನಮ್ಮ ಕಾರಿನ ಮಗ್ಗುಲಲ್ಲಿ ಪಾಸ್ ಆಯಿತು ಎಂದು ನುಡಿಯುತ್ತಾರೆ. ಚಾಸಾ-1 ಅಪಘಾತವಾದ ನಂತರ ರಸ್ತೆಯ ಎಡಭಾಗದ ಚರಂಡಿಗೆ ಬಿದ್ದರು ಎಂದರೆ ಸರಿ. ಸದರಿ ಬೈಕ್ ಸಹ ರಸ್ತೆಯ ಎಡಭಾಗಕ್ಕೆ ಬಿತ್ತು ಎಂದರೆ ಸರಿ. ಮೃತ ರಕ್ಷಿತಾ ರಸ್ತೆಯ ಎಡಭಾಗಕ್ಕೆ ಬಿದ್ದಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು, ರಸ್ತೆಯ ಬಲಭಾಗಕ್ಕೆ ಬಿದ್ದಳು ಎಂದು

ನುಡಿಯುತ್ತಾರೆ. ಸದರಿ ಅಪಘಾತ ಕಾರಿನ ಚಾಲಕ 2 ನೇ ಆರೋಪಿತರ ಅಜಾಗರೂಕತೆಯಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

3. 1 ನೇ ಆರೋಪಿತರು ಬಸ್ ಅನ್ನು ನಿಧಾನವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತವಾದ ಸ್ಥಳದ ರಸ್ತೆ ಕಿರಿದಾಗಿದ್ದರಿಂದ ಸಂಭವಿಸಿರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.